ಕಡೆ ಎಲ್ಲಾ ಭಾರಾನೂ ನಮ್ಮ ಮೇಲೆ ಹೊರಿಸಿದ್ರೆ ಅದು ನ್ಯಾಯ ಆಗ್ತಿತ್ತಾ? ಅವರವರಲ್ಲಿ ಸಂಬಂಧ ಶುರುವಾಗ್ಬಾರ್ದು ಅಂತಾನೇ'

'ಬಿಟ್ಬಾಕು ಆ ವಿಷಯ. ಮುಗಿದು ಹೋಗಿರೋ ಹಳೇ ಕತೆ. ಅಪ್ಪ ತನ್ನ ಕಾಗದಕ್ಕೆ ಉತ್ತರ ಕೊಡದೆ ಅವಮಾನ ಮಾಡಿದ್ರು ಅನ್ನೋದು ಅವಳನ್ನ ಕೊರೀತಿದ್ರೂ ಆಶ್ಚರ್ಯ ಇಲ್ಲ. ಅಕ್ಕ ಇಷ್ಟು ಚೇಂಜ್ ಆಗ್ತಾಳೆ ಅಂತ ನಾನು ಅಂದ್ಕೊಂಡೇ ಇರ್ಲಿಲ್ಲ. ಫೋನ್ ಮಾಡ್ತಿದ್ದಾಗ ಅಪ್ಪನ್ನ ನೆನೆಸ್ಕೊಂಡು ಓಡೋಡಿ ಬರ್ತಾಳೆ ಅಂದ್ಕೊಂಡಿದ್ದೆ'.

'ನನ್ನ ಕತೆ ಹೇಳಿ. ಅದ್ಯಾವ ಗಳಿಗೇಲಿ ನಿಮ್ಮನ್ನ ಮದುವೆ ಆಗೋಕೆ ಒಪ್ಕೊಂಡ್ನೋ, ಶನಿ ಹೆಗಲೇರಿದ ಹಾಗಾಯ್ತು...'

'ಇದೂ ಮುಗಿದು ಹೋಗಿರೋ ಹಳೇ ಕತೆ'.

'ತಮಾಷಿ ಮಾಡ್ಬೇಡಿ ನೀವು'.

'ತಮಾಷಿ ಅಲ್ಲ ಕಣೇ. ಮೇಲೆ ಮೇಲೆ ಜಾಸ್ತಿ ನಗ್ತಿರೋರಿಗೆ ಒಳಗೊಳಗೆ ತುಂಬಾ ನೋವಿರುತ್ತಂತೆ'.

'ಅಂದ್ರೆ? ಈಗ ನಾನು ನಗ್ಬೇಕಾ?'

'ನಾನು ನಗ್ತಿದೀನಲ್ಲ'.

ವಾರದ ಮೇಲೆ ಮತ್ತೂ ಎರಡು ದಿನ ಕಳೆದು, ಇನ್ನು ಈ ಅಕ್ಕ ಮುಖ ತೋರಿಸುವುದಿಲ್ಲ ಎಂದು ಖಾತ್ರಿಯಾಗಿ,

'ನಾವೇ ಕರ್ಕೊಂಡ್ಹೋಗಿ ಅವರ ಮನೆ ಹತ್ರ ಬಿಟ್ಟುಬರ್ಬೇಕು. ಆಗ ಏನು ಮಾಡ್ತಾರೋ' ಹತಾಶೆಯಿಂದ ಹೇಳಿದ್ದಳು ಶೀಲಾ.

'ಎಷ್ಟೂರ್ಷ ಆಗ್ಹೋಯ್ತಲ್ಲೇ. ಈಗ ನೋಡಿದ್ರೆ ಅವಳಿಗೆ ಅಪ್ಪನ ಗುರುತಾದ್ರೂ ಸಿಗುತ್ತಾ? ಯಾರೋ ಮನೆ ಮಠ ಇಲ್ಲದ ಪರದೇಶಿ ಅಂದ್ಕೋತಾಳೆ. ಆಡೋ ಹಾಗಿದ್ರೆ ಕಾರ್ಯಕ್ಕೆ ಬರೋ ಮಾತಾಡು...'

'ನಿನ್ನಪ್ಪ ಅಂತ ಹೇಳೇ ಬಿಟ್ಟರೋದು...'

'ಅವಳು ವಾಪಸು ಕರ್ಕಂಬಂದು ಬಿಟ್ಕೋಗ್ಲಿ. ಇದೇ ಕೆಲಸ ಮಾಡ್ತಿರೋಕಾಗುತ್ತಾ? ನೀನು ಏನೇ ಹೇಳು ಮಾರಾಯ್ತೀ, ಅಪ್ಪ ಅಂದ್ರೆ ನನ್ನ ಕರುಳು ಕರಗುತ್ತೆ. ತಬ್ಬಲಿ ಮಕ್ಕಳನ್ನ ಸಾಕಿ ದೊಡ್ಡ ಮಾಡಿದೋನು. ಆ ಕೃತಜ್ಞತೆ ನಮಗೆ ಇರ್ಬೇಕಲ್ವಾ?'

'ನಿಮಗೊಬ್ರಿಗೇ ಇರ್ಬೇಕಾ?'

'ಅದು ಅವರವರ ಅಂತರಾತ್ಮಕ್ಕೆ ಬಿಟ್ಟಿದ್ದು...'

* * *

ಒಂದು ಮಟಮಟ ಮಧ್ಯಾಹ್ನ ಭಾಮ ಕಾರಿನಲ್ಲಿ ತನ್ನಪ್ಪನ ಮನೆಯ ಎದುರು ಬಂದು ಇಳಿದಳು. ಭಾನುವಾರ ಅವತ್ತು. ಭಾರ್ಗವ ಮನೆಯಲ್ಲೇ ಇದ್ದ. ಕಾಲಿಂಗ್ ಬೆಲ್ ಶಬ್ದ ಮಾಡಿದಾಗ ಅವನೇ ಬಾಗಿಲು ತೆಗೆದಿದ್ದು. ಎದುರು ನಿಂತ ಅಕ್ಕನನ್ನು ಕಂಡು ಅವನಿಗೆ ಸಂತಸದೊಂದಿಗೆ ಮಿಳಿತವಾದ ಉದ್ವೇಗ. ಬದಲಾಗಿದ್ದಾಳೆ ಭಾಮ. ಆದರೆ ಗುರುತು ಸಿಗದಷ್ಟಲ್ಲ. ಮೊದಲಿನ ತಿಳಿ ಬಣ್ಣ ಮಾಸಿದೆ. ಒಂದಿಷ್ಟು ಮೈ ಬಂದಿದೆ. ಅಲ್ಲೊಂದಿಲ್ಲೊಂದು ಬಿಳಿಗೂದಲು ತಲೆಯಲ್ಲಿ ಇಣುಕುತ್ತಿದೆ.

'ಭಾರ್ಗವ ಅಲ್ಲೇನೋ? ಮಾರಾಯಾ, ದೊಡ್ಡ ಗಂಡಸಾಗಿದ್ದಿ...'

ಅಕ್ಕ, ತಮ್ಮ ಒಬ್ಬರನ್ನೊಬ್ಬರು ತಬ್ಬಿಕೊಂಡು ಕಣ್ಣೀರಾಗಿದ್ದಕ್ಕೆ ಸಾಕ್ಷಿಯಾದಳು ಶೀಲಾ, ಮಗನನ್ನು ಬಗಲಲ್ಲಿ ನಿಲ್ಲಿಸಿಕೊಂಡು.

ಪರಸ್ಪರ ಪರಿಚಯದ ಔಪಚಾರಿಕತೆ ಮುಗಿಯಿತು. ತಮ್ಮನ ಮಗನನ್ನು ಅಪ್ಪಿ ಮುದ್ದಾಡಿದಳು ಭಾಮ. ಅಪರಿಚಿತ ಹೆಂಗಸಿನ ಈ ವರ್ತನೆಯಿಂದ ಮುಜುಗರಗೊಂಡವನಂತೆ ಅವಳು ಮುತ್ತಿಕ್ಕಿದ್ದ ತನ್ನ ಕೆನ್ನೆಯನ್ನು ಗೌತಮ ಅಂಗೈಯಿಂದ ಉಜ್ಜಿ ವರೆಸಿಕೊಂಡಿದ್ದು ಅವರವರ ಸಂಭ್ರಮದಲ್ಲಿದ್ದವರಿಗೆ ಗಮನಕ್ಕೆ ಬರಲಿಲ್ಲ.

'ಎಲ್ಲೋ ಅಪ್ಪ?'

'ರೂಮಲ್ಲಿದಾರೆ ನೋಡು. ಎಷ್ಟೊತ್ತಿಗೂ ಮಲಗೇ ಇರ್ತೀನಿ ಅಂತಾರೆ...'

ಅಪ್ಪನ ಕೋಣೆಗೆ ಧಾವಿಸಿದಳು ಭಾಮ. ಎರಡೂ ಅಂಗೈಗಳನ್ನು ಜೋಡಿಸಿ ತಲೆಯಡಿಗಿಟ್ಟುಕೊಂಡು ಕಣ್ಣು ಪಿಳಿಪಿಳಿಸುತ್ತಾ ಮಲಗಿದ್ದ ವ್ಯಕ್ತಿ ತನ್ನ ಕೋಣೆಗೆ ನುಗ್ಗಿದವಳ ಕಡೆ ಕಣ್ಣು ಹೊರಳಿಸಿ ನೋಡಿತು. ಯಾವ ಭಾವನೆಯ ಅಭಿವ್ಯಕ್ತಿಯೂ ಇಲ್ಲದ ಶೂನ್ಯ ದೃಷ್ಟಿ.

'ಅಪ್ಪಾ' ಭಾಮನ ದುಃಖದ ಕಟ್ಟೆ ಭೋರ್ಗರೆಯಿತು. ತನ್ನ ಕಾಗದಗಳಿಗೆ ಉತ್ತರಿಸದೆ ನಿರ್ಲಕ್ಷ್ಯ ಮಾಡಿದವರೆಂಬ ಅಸಹನೆ ಕರಗಿ ಹೋಯ್ತು.

'ಯಾರು? ಯಾರು ನೀನು?' ಕೇಳುತ್ತಿದ್ದಾನೆ ಚಿದಾನಂದ.

'ನೀ ಹೇಳಿದ್ದಕ್ಕಿಂತ ಅಪ್ಪ ಸೊರಗಿ ಹೋಗಿದಾರೆ ಕಣೋ. ಈ ಕಣ್ಣಲ್ಲಿ ನೋಡೋಕಾಗಲ್ಲ ನಂಗೆ. ನಾನು ಇಲ್ಲಿಗೆ ಬರ್ಲೇಬಾರ್ದಿತ್ತು. ನನ್ನ ಕಣ್ಣಲ್ಲಿ ಅದೇ ಹಳೇ ಅಪ್ಪ ಉಳ್ಕೊಂಡಿರ್ತಿದ್ರು...'

ಗಂಡ, ಹೆಂಡತಿ ಮುಖ ಮುಖ ನೋಡಿಕೊಂಡರು. ಇವಳೇನು ಅಪ್ಪನನ್ನು ಕಣ್ಣಿಂದ ನೋಡಿ ಹೋಗುವುದಕ್ಕಷ್ಟೇ ಬಂದಿದ್ದಾಳಾ ಎನ್ನುವ ಅನುಮಾನ ಇಬ್ಬರ ಕಣ್ಣಲ್ಲೂ ಸ್ಪಷ್ಟವಾಗಿ ಗೋಚರಿಸುತ್ತಿತ್ತು. ಅವರ ಸಂಶಯವನ್ನು ಸುಳ್ಳುಮಾಡುವಂತೆ ಭಾಮ ಅದೇ ಉಸಿರಲ್ಲಿ ಹೇಳಿದಳು,

'ಅಪ್ಪನ ಬಟ್ಟೆಬರೆ ಏನುಂಟೋ ಎಲ್ಲಾ ಬ್ಯಾಗಿಗೆ ಹಾಕಿಡು. ಊಟ ಆಗ್ತಿದ್ದಾಗೆ ಹೊರಟು ಬಿಡ್ತೀವಿ...'

'ಅದ್ಯಾಕಷ್ಟು ಅವಸರ? ಒಬ್ಬಳೇ ಬಂದಿದ್ಯಾಕೆ? ನಿನ್ನ ಗಂಡನ್ನ, ಮಗಳನ್ನ ಕರ್ಕೊಂಡು ಬರೋದಲ್ವಾ?'

'ಅಯ್ಯೋ, ಅದೆಲ್ಲಾ ಆಗಹೋಗೋ ಮಾತಲ್ಲ. ಇಬ್ರೂ ಒಟ್ಟಿಗೆ ಮನೆ ಬಿಡೋದು ಸಾಧ್ಯಾನೇ ಇಲ್ಲ. ಪುರುಸೊತ್ತು ಮಾಡ್ಕೊಂಡು ಇಲ್ಲಿಗೆ ಬರೋಕೆ ಇಷ್ಟು ದಿನ ಬೇಕಾಯ್ತು ನೋಡು...'

'...'

'ಹಳ್ಳಿ ಮನೆ ಹಣೇಬರ ನಿಂಗೊತ್ತಿಲ್ಲ ಕಣೋ. ನನ್ನ ಕತೆ ಕೇಳಿದ್ರೆ ಮೂಗಿನ ಮೇಲೆ ಬೆರಳು ಇಟ್ಕೋತಿ. ಹಾಲು ಎಲ್ಲಿಂದ ಬರುತ್ತೆ ಅಂದ್ರೆ ನಂದಿನಿ ಪ್ಯಾಕೆಟ್ಟಿಂದ ಅನ್ನುವಷ್ಟು ಬುದ್ಧಿವಂತೆ ಆಗಿದ್ದೆ. ಈಗ ಇಪ್ಪತ್ತಿಪ್ಪತ್ತೈದು ಹಸುಗಳನ್ನ ಸಾಕಿ ಡೈರಿಗೆ ಹಾಲು ಹಾಕ್ತೀವಿ ಅಂದ್ರೆ ನಂಬ್ತೀಯಾ? ಹೈನೋದ್ಯಮ ಅಂದ್ರೆ ಏನು? ಹಸುಗಳನ್ನ ಹೇಗೆಲ್ಲಾ ಸಾಕ್ಬೇಕು ಅಂತ ಪ್ರಾತ್ಯಕ್ಷಿಕೆ ಕೊಡು ಅಂದ್ರೆ ಈ ಕ್ಷಣ ತಯಾರು'.

'ಆಶ್ಚರ್ಯ'.

'ನಮ್ಮ ವಿದ್ಯೆಗೆ ಕೆಲಸ ಸಿಕ್ಕೋದು ಅಷ್ಟರಲ್ಲೇ ಇತ್ತು. ಬದುಕೋಕೆ ದಾರಿ ಬೇಕಲ್ಲ? ಬ್ಯಾಂಕಲ್ಲಿ ಲೋನ್ ತಗೊಂಡು ಶುರು ಮಾಡ್ಕೊಂಡಿದ್ದು. ದೇವರು ಕಣ್ಣು ಬಿಟ್ಟ ಅಂತಾರಲ್ಲ, ಹಾಗಾಯ್ತು ಕತೆ. ಈಗ ಯೋಚನೆ ಇಲ್ಲ. ಮೂರ್ನಾಕು ಆಳುಗಳನ್ನ ಇಟ್ಕೊಂಡಿದೀವಿ. ಸಗಣಿ ಬಾಚೋಕೆ, ಹಾಲು ಕರೆಯೋಕೆ ನಾನೂ ಕಲ್ತಿದೀನಿ...'

'ಪರ್ವಾಗಿಲ್ಲ ನೀನು, ಗ್ರೇಟ್. ನಾನು ನೋಡು, ತಿಂಗಳ ಸಂಬಳಕ್ಕೆ ಜೋತು ಬಿದ್ದಿದೀನಿ'.

'ಕೆಲಸ ಸಿಗೋ ಹಾಗಿದ್ರೆ ನಾವೂ ಅದಕ್ಕೆ ಜೋತು ಬೀಳ್ತಿದ್ವೇನೋ. ಇದೆಲ್ಲಾ ಈಗ ಹೇಳೋಷ್ಟು ಸಲೀಸಾಗಿ ಆಗ್ಲಿಲ್ಲ ಕಣೋ. ನಿಮ್ಮ ಬಾವ ಒಂದು ಎಡವಟ್ಟು ಮಾಡ್ಕೊಂಡು ಜೀವ ತೆಕ್ಕಂಬಿಡೋಣ ಅನ್ನೋ ಹಂತಕ್ಕೆ ಬಂದಿದ್ವಿ'.

ಅದುವರೆಗಿನ ಬದುಕು ಬವಣೆಗಳನ್ನೆಲ್ಲಾ ಪ್ರೀತಿಯ ತಮ್ಮನೆದುರು ತೆರೆದಿಡುವ ಹುಮ್ಮಸ್ಸಿನಿಂದೆಂಬಂತೆ ಭಾಮ ಹೇಳುತ್ತಾ ಹೋದಳು. ಭಾರ್ಗವ ಬಾಯಿ ಕಳೆದುಕೊಂಡು ಎಂಬಂತೆ ಕೇಳುತ್ತಾ ಕುಳಿತ. ಕೈಗಳು ಅಪ್ಪನ ಬಟ್ಟೆಬರೆ ಜೋಡಿಸುತ್ತಿದ್ದರೂ ಕಿವಿ ಅಕ್ಕನ ಕಡೆ ತೆರೆದುಕೊಂಡಿತ್ತು.

'ಮಾವನ ಒಂದಿಷ್ಟು ಜಮೀನಿತ್ತು. ಭತ್ತದ ಕೊಯ್ಲು ಮುಗಿದ ಮೇಲೆ ಅದರಲ್ಲೇ ತರಕಾರಿ ಬೆಳೆದು ಮಾರ್ಕೆಟ್ಟಿಗೆ ಹಾಕ್ತಿದ್ವಿ. ಮನೆ ಖರ್ಚಿಗೆ, ಮೈದುನನ ಓದಿಗೆ ಸಾಕೂ ಸಾಲದಷ್ಟು ಉತ್ಪನ್ನ ಬರ್ತಿತ್ತು. ಬೇರೇನಾದ್ರೂ ದಾರಿ ಹುಡುಕ್ಕಳ್ದಿದ್ರೆ ಬದುಕೋಕೆ ಸಾಧ್ಯ ಇಲ್ಲ ಅಂತ ಲೆಕ್ಕ ಹಾಕಿದ್ವಿ'.

'ಹೂಂ'

'ಒಂದು ವಿಷಯ ಮೊದ್ಲೇ ಹೇಳ್ಬೇಕಿತ್ತು ಕಣೋ. ನಮ್ಮ ಮಾವ ನಿಜವಾಗ್ಲೂ ದೊಡ್ಡ ಮನಸ್ಸಿನೋರು. ಮಗಳನ್ನ ಕಳ್ಕೊಂಡು ಕುಸಿದು ಹೋಗಿದ್ರು. ನೀನು, ನಿನ್ನ ಹೆಂಡ್ತಿ ಬೇರೆ ಮನೆ ಮಾಡ್ಕೊಂಡಿರಿ. ನಮ್ಮ ಊಟ, ತಿಂಡಿ ಅವಳಿಗೆ ಒಗ್ಗುತ್ತೋ, ಇಲ್ವೋ. ಯಾವ ವಿಷಯಕ್ಕೂ ಮನೇಲಿ ಬಿರುಕು ಬರಬಾರ್ದು ಅಂತ ಹೇಳಿಬಿಟ್ರು...'

'...'

'ನಮ್ಮನೆ ಅಂದ್ರೆ ಹೆಂಗಿತ್ತು ಅಂತಿ? ಜೋಪಡಿ ಹಾಗಿತ್ತು ಕಣೋ. ಮನೆ ಅಂತ ಕಟ್ಕೊಳ್ಳೋಕೆ ದುಡ್ಡು ಎಲ್ಲಿತ್ತು? ಮಾವ ಶಕ್ತಿ ಮೀರಿ ಕೊಟ್ಟಿದ್ದು, ನಾವು ತೆಗೆದುಕೊಂಡಿದ್ದು'.

'ಛೇ'

'ಸೌದೆ ಒಲೇಲಿ ಅಡುಗೆ ಮಾಡಿದೀನಿ. ಕಲ್ಲು ಒರಳಲ್ಲಿ ಖಾರ ಅರೆದಿದೀನಿ. ಹರಿದ ಸೀರೆಗೆ, ನೈಟಿಗೆ ಹೊಲಿಗೆ ಹಾಕಿ...'

'ಸಾಕು ಅಕ್ಕಾ, ಸುಖವಾಗಿ ಬೆಳೆದೋಳು ಇಷ್ಟೆಲ್ಲಾ ಕಷ್ಟಪಡೋ ಅಗತ್ಯ ಇತ್ತಾ? ಪಶ್ಚಾತ್ತಾಪ ಆಗ್ಲಿಲ್ವಾ ನಿಂಗೆ?'

'ಪಶ್ಚಾತ್ತಾಪ ಆಗೋಕೆ ನಾನು ಬಿಡ್ಲಿಲ್ಲ. ನಾಲ್ಕು ದಿನ ಕಳೆದ್ರೆ ಎಲ್ಲಾ ಹಳಸೋಕೆ ಶುರುವಾಗುತ್ತೆ ಅಂದಿದ್ರು ಅಪ್ಪ. ಹಾಗಾಗ್ಬಾರ್ದು, ಯಾವ ಕಾರಣಕ್ಕೂ ಸೋಲ್ಬಾರ್ದು ಅಂತ ನಂಗೂ ಹಟ ಇತ್ತು. ವೆಂಕಟೇಶ ಒಳ್ಳೆಯೋನು. ಹಳ್ಳಿ ಬದುಕಿನ ಅನುಭವ ನನಗಿಲ್ದಿದ್ರೂ ಅವನಿಗೆ ಇದ್ದೇ ಇತ್ತು...'

'ಹೂಂ'

'ಹಸು ಸಾಕೋಕೆ ಶುರು ಮಾಡಿದ್ವು ಅಂದ್ನಲ್ಲ,